ನಿಂತುಹೋಗಿತ್ತು. ಒತ್ತಾಯ ಮಾಡಿ ಕರೆದಾಗ ಹೋಗದೆ ಬಿಡುವಂತಿಲ್ಲ. ಹೋಗುವಂತೆಯೂ ಇಲ್ಲ. ಹೆಚ್ಚುವರಿಯಾಗಿ ಒಂದು ಒಡವೆ ಹಾಕಿಕೊಳ್ಳೋಣವೆಂದರೆ ಎಲ್ಲಾ ಮಗನ ಕೈಯಲ್ಲಿ ಉಳಿದುಹೋಗಿದೆ. ಹೊಸ ಸೀರೆ ಕೊಳ್ಳುವುದೆನ್ನುವುದು ಹೆಚ್ಚೂ ಕಡಿಮೆ ನಿಂತೇಹೋಗಿದೆ. ಅದಕ್ಕಿಂತ ಮಿಗಿಲಾಗಿ ಯಾರೋ ಮನೆಗೆ ಬಂದರೆ ಬಿಸಿಲು ಹೊತ್ತಾದರೆ ಒಂದು ಲೋಟ ಪಾನಕ, ಇಲ್ಲದಿದ್ದರೆ ಕಾಫಿ ಕೊಟ್ಟು ಕಳಿಸುವ ಅತಿಥಿ ಧರ್ಮ ರಕ್ತಗತವಾಗಿದ್ದವಳಿಗೆ ಬಂದವರನ್ನು ಹಾಗೇ ಕಳಿಸುವುದೆಂದರೆ ಜೀವ ಬಾಯಿಗೆ ಬರುತ್ತಿತ್ತು. ಹೆಂಗಸರು ಬಂದರೆ ಕುಪ್ಪಸದ ಕಣದ ಜೊತೆ ದುಡ್ಡಿಟ್ಟು ಕೊಡುವುದಿರಲಿ, ಕಣ ಕೊಟ್ಟು ಕಳಿಸುವುದಕ್ಕೂ ಹಿಂದೆ ಮುಂದೆ ನೋಡಬೇಕಾದ ಪರಿಸ್ಥಿತಿ.

ತಾವು ಹಿಂದೆ ಬದುಕಿ ಬಾಳಿದ ರೀತಿಯನ್ನು ನೋಡಿದವರು ಈಗಿರುವ ಪರಿಸ್ಥಿತಿ ಕಂಡರೆ ಎದುರಿಗಲ್ಲದಿದ್ದರೂ ಬೆನ್ನ ಹಿಂದೆ ಏನೆಂದುಕೊಳ್ಳುವರೋ ಎನ್ನುವ ಮುಜುಗರ. ತಾವು ಹೋದಲ್ಲಿ ವೆಂಕಟರಾಮನ ಸಂಸಾರ ಬಂದಿದ್ದರೆ ಅವರನ್ನು ಎದುರಿಸಲು ಸುತರಾಂ ಸಾಧ್ಯವಿಲ್ಲವೆನ್ನುತ್ತಿತ್ತು ಇಡೀ ಜೀವ. ಯಾರು ಕರೆದರೂ ಶಿವರಾಮ ತನ್ನ ಕಾಯಿಲೆಯ ನೆಪದಿಂದ ನುಣುಚಿಕೊಳ್ಳುವುದನ್ನು ಕಲಿತಿದ್ದ. 'ಹೊತ್ತಿಗೆ ಸರಿಯಾಗಿ ಉಣ್ಣದ್ರೆ ಶುಗರ್ ಹೆಚ್ಚಾಗಿ ತಲೆ ಚಕ್ರ ಬರುತ್ತೆ. ಸಂಜೆ ಹೊತ್ತು ಒಂದು ಗಳಿಗೆ ಬಂದು ಹೋಗ್ತೀವಿ' ಅನ್ನುತ್ತಿದ್ದ. ಸಂಜೆ ಹೊತ್ತಿಗೆ ಆಹ್ವಾನಿತರೆಲ್ಲರೂ ಬಂದು ಹೋಗಿರುತ್ತಾರೆ ಎನ್ನುವ ನಂಬಿಕೆ. ಅದು ನಿಜವೂ ಆಗಿರುತ್ತಿತ್ತು. ತಂತಿಯ ಮೇಲಿನ ನಡಿಗೆ ಅನ್ನುವ ಹಾಗೆ ಸಾಗುತ್ತಿತ್ತು ಬದುಕು. ಇಲ್ಲಿಗೆ ಬರುವ ತೀರ್ಮಾನ ಮಾಡುವ ಮುಂಚೆ ಏನೆಲ್ಲಾ ಅಗ್ನಿದಿವ್ಯಗಳನ್ನು ಎದುರಿಸಬೇಕಾಗಿ ಬರಬಹುದೆಂಬುದನ್ನು ಸೀತಾಲಕ್ಷ್ಮಿ ಬಿಡಿ, ಲೋಕ ಕಂಡರಿಯದ ಮುಗ್ಧೆ, ಬುದ್ಧಿವಂತ ಎಂದು ತನಗೆ ತಾನೇ ಅಂದುಕೊಂಡಿದ್ದ ಶಿವರಾಮ ಕೂಡ ಊಹಿಸಿಕೊಂಡಿರಲಿಲ್ಲ. ಎಷ್ಟೇ ಕೈಹಿಡಿತ ಮಾಡಿದರೂ ತಿಂಗಳ ಕೊನೆಗೆ ಕೈ ಕಚ್ಚುತ್ತಿತ್ತು. ಯಾವ ಊಟದ ಮನೆಯ ಹೇಳಿಕೆ ಬಂದರೂ, ಸಂಜೆ ಹೊತ್ತಿಗೆ ಹಾಜರಿ ಹಾಕಿ ಬಂದರೂ, ಕವರಿನಲ್ಲಿ ಒಂದು ನೋಟು ಇಟ್ಟು ಉಡುಗೊರೆ ಎಂದು ಕೊಡದಿದ್ದರೆ ಮರ್ಯಾದೆ ಬರುತ್ತದೆಯೇ? ಕೊಡುವಾಗ ತೀರಾ ಚೌಕಾಶಿ ಮಾಡಲು ಒಣಜಂಭ ಒಪ್ಪುವುದಿಲ್ಲ. ತಿಂಗಳ ಖರ್ಚಿನಲ್ಲಿ ಏನೋ ಒಂದನ್ನು ಖೋತಾ ಮಾಡಿ ಸರಿದೂಗಿಸುವ ಸರ್ಕಸ್ಸು. ಶಿವರಾಮನ ಒಂದು ಮಾತು ಕೇಳಿ ಕೇಳಿ ಸೀತಾಲಕ್ಷ್ಮಿಗೆ ದಡ್ಡು ಬಿದ್ದಿತ್ತು. ಏನೇ ತರಲು ಹೇಳಿದರೂ,

'ಮೊನ್ನೆ ಇನ್ನೂ ತಂದ್ಕೊಟ್ಟಿದ್ದಲ್ವಾ?' ಎನ್ನುವ ಮಾತು. ಅಥವಾ ಇಂಥ ಮಾತಾಡುವುದು ಶಿವರಾಮನಿಗೆ ಮೈಯಿಂಡು ಹೋಗಿತ್ತು. ಕೇಳುವುದು ಸೀತಾಲಕ್ಷ್ಮಿಗೂ

***

'ಅಲ್ಲಿದೀನಿ', 'ಇಲ್ಲಿದೀನಿ' ಎಂದು ದೂರದಿಂದ ಹೆದರಿಸುತ್ತಿದ್ದ ಮಾರಿ ಮನೆಗೆ ಬಂದು ಬಾಗಿಲು ತಟ್ಟಿತು. ಮೊದಲು ಸಣ್ಣಗೆ ಜ್ವರ ಬಂತು ಶಿವರಾಮನಿಗೆ. ಗಂಟಲು ನೋವು ಶುರುವಾಯ್ತು. ದನಿ ಗೊಗ್ಗರು, ಕೆಮ್ಮು.

'ನನ್ನ ಹತ್ರ ಬರ್ಬೇಡ, ಮುಟ್ಟಿಸ್ಗಂಬೇಡ. ದೂರ ಇರು...' ಎಂದು ಶಿವರಾಮ ಇದ್ದ ಒಂದು ಕೋಣೆಯಲ್ಲಿ ದಿಗ್ಬಂಧನ ವಿಧಿಸಿಕೊಂಡ. ಸೀತಾಲಕ್ಷ್ಮಿ ಕಂಗೆಟ್ಟಳು. ಮಗನಿಗೆ ಫೋನ್ ಹೋಯ್ತು. ಅವನು ತನ್ನ ಗೆಳೆಯನೊಬ್ಬನಿಗೆ ಸುದ್ದಿ ತಲುಪಿಸಿದ. ಆ ಗೆಳೆಯ ಆಸ್ಪತ್ರೆಗೆ ವಿಷಯ ಮುಟ್ಟಿಸಿದ. ಅಲ್ಲಿಂದ ಆ್ಯಂಬುಲೆನ್ಸ್ ಬಂದು ಶಿವರಾಮನನ್ನು ಹತ್ತಿಸಿಕೊಂಡು ಹೋದ ಮೇಲೆ ಆ ಮನೆಯ ಕಡೆ ನೋಡುವುದಕ್ಕೂ ಹೆದರಿದರು ಸುತ್ತಮುತ್ತಲ ಜನ. ಕೊರೊನಾ ಬಂದ ಮನೆ ಎಂದು ಗುರುತಿಸಲು ಮನೆಗೆ ಮುದ್ರೆ ಬಿತ್ತು. ಮನೆಯ ಸುತ್ತಮುತ್ತ ಕ್ರಿಮಿನಾಶಕ ಸಿಂಪಡಿಸಲಾಯ್ತು. ಸೀತಾಲಕ್ಷ್ಮಿಗೆ ಗೃಹಬಂಧನ. ಅಕ್ಕಿ ತರಲು ಗಂಡನನ್ನು ಕಳಿಸಿದ್ದೇ ಗ್ರಹಚಾರ ಕೆಡಲು ಕಾರಣವಾಯ್ತು ಎಂದು ಸೀತಾಲಕ್ಷ್ಮಿ ಕಣ್ಣೀರ್ಗರೆದಳು. ಧೈರ್ಯ ತುಂಬುವವರು ಯಾರೂ ಇಲ್ಲ ಅನ್ನದಂತೆ ಮಗ ಗಂಟೆಗೊಂದು ಸಲ ಎನ್ನುವ ಹಾಗೆ ಫೋನ್ ಮಾಡುತ್ತಿದ್ದ.

'ಹೆದರ್ಕಂಬೇಡ ಅಮ್ಮಾ, ನನ್ನ ಫ್ರೆಂಡ್ಸ್ ಡಾಕ್ಟ್ರ ಹತ್ರ ಮಾತಾಡ್ತಾರೆ. ದುಡ್ಡು ಎಷ್ಟು ಖರ್ಚಾದ್ರೂ ಸರಿ, ಅಪ್ಪನ್ನ ಉಳಿಸ್ಕಂತೀನಿ...' ಅನ್ನುತ್ತಿದ್ದ. ಫ್ರೆಂಡ್ಸ್ ಎಂದು ಮಗ ನಂಬಿಕೊಂಡಿದ್ದವರು, ಈ ದಂಪತಿಗೂ ಆತ್ಮೀಯರಾಗಿದ್ದವರು, ಡಾಕ್ಟರಿಗೆ ಏನು ಹೇಳಿದರೋ, ಬಿಟ್ಟರೋ ಸೀತಾಲಕ್ಷ್ಮಿಗೆ ಗೊತ್ತಾಗಲಿಲ್ಲ. ಆದರೆ ಮನೆಯ ಕಡೆ ಯಾರೂ ಸುಳಿಯಲಿಲ್ಲ. ಎಲ್ಲರಿಗೂ ಅವರವರ ಜೀವ ದೊಡ್ಡದು. ಅವರವರ ಸಂಸಾರ, ಬದುಕು ದೊಡ್ಡದು. 'ಏನಾದ್ರೂ ಬೇಕಾ ಅಮ್ಮಾ?' ಎಂದು ಫೋನ್ ಮಾಡಿ ಲೋಕರೂಢಿಯಾಗಿ ವಿಚಾರಿಸಿಕೊಂಡವರಿಗೆ ಸೀತಾಲಕ್ಷ್ಮಿ ನಕಾರ ಸೂಚಿಸಿದಳು. ಅಕ್ಕಿ, ಉಪ್ಪು ಎರಡಿದ್ದರೆ ಸಾಕು, ಗಂಜಿ ಬೇಯಿಸಿಕೊಂಡು ಉಣ್ಣಬಹುದು ಎಂದು ಅವಳ ಲೆಕ್ಕಾಚಾರ. ಇಷ್ಟಕ್ಕೂ ಗಂಟಲೊಳಗೆ ಅನ್ನ ಇಳಿಯಬೇಕಲ್ಲ? ಗಂಡ ಹುಷಾರಾಗಿ ಮನೆಗೆ ಬಂದರೆ ಸಾಕು, ಬರುತ್ತಾರೆ, ಬಂದೇ ಬರುತ್ತಾರೆ, ನಂಬಿದ ದೇವರು ಬಿಟ್ಟು ಹಾಕುವುದಿಲ್ಲ. ಕಂಡ ಕಂಡ ದೇವರುಗಳಿಗೆ ಹರಕೆ ಕಟ್ಟಿಕೊಂಡಳು ಸೀತಾಲಕ್ಷ್ಮಿ. ಗಂಜಿಯೊಡನೆ ಕಣ್ಣೀರನ್ನೂ ಬೆರೆಸಿ ಉಂಡು ದಿನ ದೂಡಿದಳು. ಶಿವರಾಮಯ್ಯಂಗೆ ವಯಸ್ಸಾಗಿದೆ. ಶುಗರ್ ಇದೆ. ಮೇಲೆ ಬೀಳೋದು ಕಷ್ಟ. ಪಾಪ, ಸೀತಕ್ಕಂಗೆ ದೊಡ್ಡ ಕಷ್ಟ ಬಂತು... ಎಂದು ಪರಿಚಯದ ಜನ ಮಾತಾಡಿಕೊಳ್ಳುವುದೇನಾದರೂ ಅವಳ ಕಿವಿಗೆ ಬಿದ್ದಿದ್ದರೆ ಸೀತಮ್ಮನ ಎದೆ ಒಡೆದು ಹೋಗುತ್ತಿತ್ತು, ಬಹುಶಃ.

***

ಬಚಾಯಿಸಿಕೊಳ್ಳಲಿಲ್ಲ ಶಿವರಾಮ, ಊರ ಮಂದಿಯ ಬಾಯಲ್ಲಿ ಶಿವರಾಮಯ್ಯ. ಆಸ್ಪತ್ರೆಗೆ ಸೇರಿಸಿದ ಎಂಟೇ ದಿನಕ್ಕೆ ಉಸಿರು ನಿಂತುಹೋಯ್ತು. ಮನೆಗೆ ಫೋನ್ ಮಾಡಿ ವಿಷಯ ತಿಳಿಸಿದ ಆಸ್ಪತ್ರೆಯವರು ಅಂತಿಮ ವಿಧಿವಿಧಾನಕ್ಕೆ ಶವವನ್ನು ಒಪ್ಪಿಸಲಿಲ್ಲ. 'ಯಾರ ಹಂಗೂ ಬೇಡ..., ಯಾರ ಹಂಗೂ ಬೇಡ...' ಅನ್ನುತ್ತಿದ್ದ ಶಿವರಾಮಯ್ಯ ಕೊಳ್ಳಿ ಇಡಿಸಿಕೊಳ್ಳುವುದಕ್ಕೂ ಯಾರ ಹಂಗೂ ಬಯಸದೆ, ಯಾರಿಂದಲೂ ಒಂದು ಉದ್ಧರಣೆ ನೀರು ಬಾಯಿಗೆ ಬಿಡಿಸಿಕೊಳ್ಳದೆ ಹಿಡಿಬೂದಿಯಾಗಿ ಹೋದರು. ಸೀತಮ್ಮನಿಗೆ ಏನೆಂದರೆ ಏನೂ ಗೊತ್ತಾಗುತ್ತಿರಲಿಲ್ಲ. ಏನೂ ತಲೆಗೆ ಹೋಗುತ್ತಿರಲಿಲ್ಲ. ಅವರನ್ನು ಸಂತೈಸಲು ಯಾರೂ ಮನೆಗೆ ಬರಲಿಲ್ಲ. ಮರುದಿನ ಬೆಳಿಗ್ಗೆ ನಾಲ್ಕು ಗಂಟೆಯ ಹೊತ್ತಿಗೆ ವಿಶೇಷ ಪರವಾನಿಗೆ ಪಡೆದು ಮಗ ಪ್ರಸನ್ನ ಮನೆಗೆ ಬರುವವರೆಗೆ ಅವರು ಬಾಯಿಗೆ ಒಂದು ತೊಟ್ಟು ನೀರು ಹಾಕಿಕೊಂಡಿರಲಿಲ್ಲ. ಮಗನನ್ನು ಕಂಡಿದ್ದೇ ಗಟ್ಟಿ ದನಿಯಲ್ಲಿ ಗದರಿದರು ಸೀತಮ್ಮ,

'ನೀನ್ಯಾಕೆ ಬಂದೆ? ದೂರ, ದೂರ ಇರು. ಹತ್ರ ಬರ್ಬೇಡ. ಮುಟ್ಟಿಸ್ಗಂಬೇಡ...'

ಮನಸಾರೆ ಅಳುವುದಕ್ಕೆ ಆತ್ಮೀಯ ತೋಳುಗಳ ಆಸರೆಗೆ ಆಸ್ಪದವಿಲ್ಲ. ಕಣ್ಣೊರೆಸುವ ಅನ್ಯರು ದಿಕ್ಕಿಲ್ಲ. ಪ್ರಸನ್ನ ಮನೆಗೆ ಬೀಗ ಹಾಕಿ ಅಮ್ಮನನ್ನು ತನ್ನ ಜೊತೆ ಕರೆದುಕೊಂಡು ಹೋಗಲು ಸನ್ನದ್ಧನಾದ. ಅವಳ ದಿನಬಳಕೆಯದು ಎನಿಸಿದ ನಾಲ್ಕು ಸೀರೆ, ಬಟ್ಟೆಗಳನ್ನು ಅವನೇ ಬ್ಯಾಗಿಗೆ ತುಂಬಿದ. 'ಎಲ್ಲಿಗೆ?' ಕೇಳಿದರು ಸೀತಮ್ಮ.

'ಬೆಂಗಳೂರಿಗೆ...' ಅಂದ ಮಗ.

'ನಾನು ಎಲ್ಲಿಗೂ ಬರಲ್ಲ...' ಎನ್ನುವಂತೆ ಕೈ ಅಲುಗಿಸಿ ಏನೋ ಸೂಚಿಸಿದರು ಸೀತಮ್ಮ. ಸೊಸೆಯ ಅಪ್ಪ, ಅಮ್ಮ ಮಗನ ಮನೆಯಲ್ಲಿ ಕಾಯಂ ಆಗಿ ನೆಲೆಯಾಗಿರುವುದು ಅವರಿಗೆ ಗೊತ್ತಿದೆ. ತಾನು ಹೋದರೆ ಅಲ್ಲಿಯೂ ಪರಕೀಯಳಾಗಿಬಿಡುತ್ತೇನೆಯೇ ಹೊರತು ಎಲ್ಲರೊಡನೆ ಒಂದಾಗಿ ಬದುಕಲು ಸಾಧ್ಯವಾಗವಾಗಲಿಕ್ಕಿಲ್ಲ ಎಂದು ಅವರಿಗೆ ಅನಿಸುತ್ತಿದೆ. ಮನೆ ತುಂಬಿದ ಸೊಸೆಯೊಡನೆ ಹೊಂದಿಕೊಂಡು ಬದುಕಲು ಸಾಧ್ಯವಾಗಿರಲಿಲ್ಲ ಶಿವರಾಮಯ್ಯನಿಗೆ. ತಾನು ಅಷ್ಟು ಬಿಗು ಅಲ್ಲದಿದ್ದರೂ ಸೊಸೆಯ ಪರಿವಾರದೊಡನೆ ಹೊಂದಾಣಿಕೆ ಕಷ್ಟ, ಕಷ್ಟ. ಒಬ್ಬಳೇ ಇರಲು ಸಾಧ್ಯವೇ ಅಂದರೆ ಆ ಧೈರ್ಯವೂ ಇಲ್ಲ. ಗಂಡ ಪದೇ ಪದೇ ಉರು ಹಾಕುತ್ತಿದ್ದ ಮಾತು ನೆನಪಾಯ್ತು ಸೀತಮ್ಮನಿಗೆ, 'ಯಾವುದಾದ್ರೂ ವೃದ್ಧಾಶ್ರಮಕ್ಕೆ ಸೇರಿಸ್ಬಿಡು ನನ್ನ. ಸರ್ಪನಹಾಂವಿನ ಹಾಗೆ ಇಪ್ಪತ್ತು ಲಕ್ಷ ರೂಪಾಯಿ ಅಸಲಿಗೆ ಕೈ ಹಚ್ಚದೆ ನಂಗೋಸ್ಕರ ಇಟ್ಟು ಹೋಗಿದಾರೆ ನಿನ್ನ ಅಪ್ಪ...'

'ಸುಮ್ಮಿರ್ತೀಯಾ ನೀನು?' ಎನ್ನುವಂತೆ ಪ್ರಸನ್ನ ತೋರುಬೆರಳನ್ನು ತುಟಿಯ ಮೇಲಿಟ್ಟ. 'ಸ್ವಲ್ಪ ದಿನ ಅಷ್ಟೇ. ನೀನೇನು ಕಾಯಮ್ಮಾಗಿ ಅಲ್ಲಿ ಇರಬೇಕೂಂತಿಲ್ಲ. ನಿಂಗೆ ಅಡ್ಜೆಸ್ಟ್ ಆಗೋಕೆ ಕಷ್ಟ ಆಗುತ್ತೆ. ಗೊತ್ತು ನಂಗೆ...' ಅನ್ನುತ್ತಿದ್ದಾನೆ ಪ್ರಸನ್ನ. ಆಮೇಲೆ? ಎಂದು ಕೇಳಲಿಲ್ಲ ಸೀತಮ್ಮ. ಆಮೇಲೆ ವೃದ್ಧಾಶ್ರಮ ಎನ್ನುವುದು ಅವರಿಗೆ ಮನದಟ್ಟಾಗಿತ್ತು. (ಸಶೇಷ)